ISSN : 2320-0391

साहित्य और संस्कृति

# सृजन ಸೃಜನ


हिंदी-कन्नड त्रैमासिक पत्रिका

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

जुलाई - सितंबर २०१८



RNI Regd. No. KARBIL/2014/54464 Postal Regd. No/ PMG/KA/NK/BJP/60/2017-19



नोटों की कीमत घट रही है
सबकुछ महँगा हो रहा है
मात्र मनुष्य सस्ता हो रहा है।
भूमि-आकाश के बीच का अंतर
कम हो रहा है,
मनुष्य-मनुष्य के बीच का अंतर
बढ रहा है।
ज्ञान-विज्ञान में वृध्दि हो रही है
प्रेम-विश्वास कम हो रहा है
कला-साहित्य की परिधि बढ रही है
उनका स्तर गिर रहा हैं
खाने के मुँह बढ रहे हैं
कमाने के हाथ, घट रहे हैं
नगर के विस्तार हो रहे हैं
गुणवत्ता कम हो रही है
गाँव-गाँव में योजनाएँ बढ रही हैं
मन-मन का मिलाप
कम हो रहा है
स्वतंत्रधीर सिध्देश्वर
बाहरी अमीरी बढने के साथ-साथ
आंतरिक गरीबी में वृध्दि हो रही है।

– सिध्दय्या पुराणिकर 'काव्यानंद'

ಓಟುಗಳ ಬೆಲೆ ಬೆಳೆಯುತ್ತಿದೆ,
ನೋಟುಗಳ ಬೆಲೆ ಇಳಿಯುತ್ತಿದೆಯಯ್ಯಾ
ಎಲ್ಲವೂ ತುಟ್ಟಿಯಾಗುತ್ತಿದೆ,
ಮನುಜ ಮಾತ್ರ ಅಗ್ಗವಾಗುತ್ತಲಿಹನಯ್ಯಾ;
ಭೂಮ್ಯಾಕಾಶಗಳ ನಡುವಣ ಅಂತರ
ಕಡಿಮೆಯಾಗುತ್ತಿವೆ.
ಮನುಜ ಮನುಜರ ನಡುವಣ ಅಂತರ
ಹೆಚ್ಚುತ್ತಿದೆಯಯ್ಯಾ;
ಜ್ಞಾನ-ವಿಜ್ಞಾನಗಳು ಹೆಚ್ಚುತ್ತಿವೆ,
ಪ್ರೀತಿ ವಿಶ್ವಾಸಗಳು ಕಡಿಮೆಯಾಗುತ್ತಿವೆಯಯ್ಯಾ;
ಕಲೆ ಸಾಹಿತ್ಯಗಳ ವ್ಯಾಪ್ತಿ ಹೆಚ್ಚುತ್ತಿದೆ,
ಅವುಗಳ ಗುಣ ಘನತೆ
ಕಡಿಮೆಯಾಗುತ್ತಿವೆಯಯ್ಯಾ;
ಉಣ್ಣುವ ಬಾಯಿಗಳು ಹೆಚ್ಚುತ್ತಿವೆ,
ದುಡಿಯುವ ಕೈಗಳು
ಕಡಿಮೆಯಾಗುತ್ತಿವೆಯಯ್ಯಾ;
ನಗರ ವಿಸ್ತರಣೆಗಳು
ಕಡಿಮೆಯಾಗುತ್ತಿವೆಯಯ್ಯಾ;
ಊರೂರಿಗೆ ಯೋಜನೆಗಳು ಹೆಚ್ಚುತ್ತಿವೆ,
ಮನಮನಗಳ ಸಂಯೋಜನೆಗಳು
ಕಡಿಮೆಯಾಗುತ್ತಿವೆಯಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ,
ಹೊರಗೆ ಸಿರಿ ಹೆಚ್ಚಿದಷ್ಟೂ
ಒಳಗೆ ಬಡತನ ಬೆಳೆಯುತ್ತಿವೆಯಯ್ಯಾ !

– ಡಾ. ಸಿದ್ಧಯ್ಯ ಪುರಾಣಿಕರ 'ಕಾವ್ಯಾನಂದ'

ISSN 2320-0371

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,
विजयपुर - ५८६१०३ (कर्नाटक)

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,
ವಿಜಯಪುರ – ೫೮೬೧೦೩ (ಕರ್ನಾಟಕ)

## ಪರಿವಿಡಿ


೧. ಮರಾಠಿ ಕಥಾ ಸಾಹಿತ್ಯ ಒಂದು ಅವಲೋಕನ • ಡಾ. ಎಸ್. ಟಿ. ಮೇರವಾಡೆ ೨೮

೨. ಶ್ರೀಕೃಷ್ಣ ಪಾರಿಜಾತದಲ್ಲಿ ನವೀಕರಣ • ಡಾ. ಸಿ. ಎಂ. ತಳವಾರ ೩೧

೩. ಕನ್ನಡ ಭಾಷೆ : ಎದುರಿಸುತ್ತಿರುವ ಆತಂಕಗಳು • ಪ್ರೊ. ವಾಯ್. ವಾಯ್. ಕೊಕ್ಕನವರ ೩೬

೪. ಜಯಂತ ಕಾಯ್ಕಿಣಿಯವರ ಬಣ್ಣದ ಕಾಲು ಕಥಾ ಸಂಕಲನದ ಕಥನ ಕ್ರಮ • ಸಂಜಯಕುಮಾರ ಶಿ. ಹಾರೋಬಿಡಿ ೪೦

೫. ಉಪಸಂಸ್ಕೃತಿ ಮತ್ತು ಸಣ್ಣ ಕತೆಗಳಾಧಾರಿತ ಕನ್ನಡ ಸಿನಿಮಾಗಳು • ಮಂಜುನಾಥ ವೈ. ೪೫

೬ ಜನಪದ ಕಲೆಗಳಲ್ಲಿ ಪ್ರಾತಿನಿಧಿಕ ವ್ಯಕ್ತಿಯಾಗಿ ಏಕಲವ್ಯ • ಅನಿತಾ ಟಿ. ಎಂ. ೪೮

೭ ನಾಗಚಂದ್ರ, ರನ್ನರಲ್ಲಿ ಪ್ರತಿನಾಯಕರ ಬಗೆಗೆ ಮೃದು ಧೋರಣೆ • ಶ್ರೀಮತಿ. ಪ್ರಭಾವತಿ ಪಿ. ಕಣವಿ ೫೦

೮. ಎಸ್. ವ್ಹಿ. ಪಾಟೀಲ ಅವರ ಕಥಾಸಾಹಿತ್ಯ • ಪ್ರೊ. ಬುಳ್ಳಣ್ಣವರ ಬಾಸೂಸಾಬ ೫೪


### ಅಂಕಣ – ೩


೯. ವಿಚಿತ್ರ ವ್ಯಕ್ತಿತ್ವದ ವ್ಯಕ್ತಿಗಳು • ಡಾ. ಆರ್. ವ್ಹಿ. ಪಾಟೀಲ ೫೭

# ಮರಾಠಿ ಕಥಾ ಸಾಹಿತ್ಯ ಒಂದು ಅವಲೋಕನ

● ಡಾ. ಎಸ್. ಟಿ. ಮೇರವಾಡೆ

ಮರಾಠಿ 'ಕಥಾ' ಸಾಹಿತ್ಯ ಪರಂಪರೆಯಲ್ಲಿ ಒಂದು ಪ್ರಮುಖ ಹಾಗೂ ಮಹತ್ವದ ಪ್ರಕಾರವಾಗಿದೆ. ಕಾಲಘಟ್ಟದ ಪ್ರವಾಹದಲ್ಲಿ ಕಥಾ ಸಾಹಿತ್ಯ ವಿಕಾಸವಾಗುತ್ತಲೆ ನಡೆದಿದೆ. ಮರಾಠಿ ಕಥಾ ಸಾಹಿತ್ಯದ ಬೇರು ಮಹಾರಾಷ್ಟ್ರದ ಮಣ್ಣಿನಲ್ಲಿ ಆಳವಾಗಿ ಬಿಟ್ಟಿದೆ. ಇಲ್ಲಿಯ ಜನ-ಜೀವನ, ವ್ಯವಹಾರ ಹಾಗೂ ಪರಂಪರೆಯನ್ನು ಅದು ರಕ್ಷಿಸುತ್ತಾ ಬಂದಿದೆ. ಜನ್ಮಕಥೆ, ಲೋಕಕಥೆ, ರಾಮಾಯಣ-ಮಹಾಭಾರತ ಆಧಾರಿತ ಕಥೆ, ಪೌರಾಣಿಕ ಕಥೆ, ಮಹಾನುಭಾವರ ಕಥೆ, ಸ್ವಾತಂತ್ರ್ಯ ಪೂರ್ವ ಕಥೆ, ಸ್ವಾತಂತ್ರ್ಯೋತ್ತರ ಕಥೆ, ಹತ್ತೊಂಬತ್ತನೆಯ ಶತಮಾನದ ಕಥೆ, ವಾಸ್ತವಿಕ ಕಥೆ, ಗ್ರಾಮೀಣ ಕಥೆ, ದಲಿತ ಕಥೆ, ಆದಿವಾಸಿ ಕಥೆ, ಹಾಸ್ಯ-ವ್ಯಂಗದ ಕಥೆ ವಿಜ್ಞಾನ ಕಥೆ, ಗೂಢಕಥೆ ಮುಂತಾದವುಗಳ ವಿಶ್ವ ವಿರಾಟ ಮತ್ತು ವ್ಯಾಪಕಗೊಂಡಿವೆ.

ಮರಾಠಿ ಸಾಹಿತ್ಯದಲ್ಲಿ ಮಹಾರಾಷ್ಟ್ರ ಸ್ಥಾಪನೆಗೊಂಡ ನಂತರದ ಐವತ್ತು ವರ್ಷಗಳು ಅತ್ಯಂತ ಮಹತ್ವ ಪೂರ್ಣವಾಗಿವೆ. ೧೯೬೦ರ ಆಸುಪಾಸಿನಲ್ಲಿ ಮರಾಠಿ ಸಾಹಿತ್ಯದಲ್ಲಿ ಬಹಳಷ್ಟು ಪರಿವರ್ತನೆಗಳಾದವು ಮತ್ತು ಅದರಿಂದಲೆ ಸಾಹಿತ್ಯದಲ್ಲಿ ಹೊಸ ಆಂದೋಲನಗಳು ಹಾಗೂ ಸಾಹಿತ್ಯದ ಹೊಸ ಚಿಂತನೆಗಳು ಉಗಮವಾದವು. ಜೊತೆಗೆ ಸಾಹಿತ್ಯವು ಸಮಾಜಕ್ಕೆ ಒಂದು ಹೊಸ ಆಯಾಮ ನೀಡಿತು. ಈ ಐವತ್ತು ವರ್ಷಗಳಲ್ಲಿ ಹೊಸ ಹಾಗೂ ಪ್ರಯೋಗಶೀಲ ಸಾಹಿತ್ಯಕಾರರು ಹುಟ್ಟಿಕೊಂಡರು. ಇದರಲ್ಲಿ ವಸಂತ ಪಳಶೀಕರ್, ಕಮಲ ದೇಸಾಯಿ, ರಂಗನಾಥ ಪಠಾರೆ, ಭಾರತ ಸಾಸಣೆ, ರಾಜನ ಗವಸ, ಭಾಸ್ಕರ ಚಂದನಶಿವ, ಪ್ರತಿಮಾ ಜೋಶಿ, ವಸಂತ ಆಬಾಜಿ ಡಹಾಕೆ, ಪ್ರೇಮಾನಂದ ಗಜ್ವಿ, ರಜನೀ ಪುರುಳೆಕರ್ ಮುಂತಾದವರಿದ್ದಾರೆ.

ಇಪ್ಪತ್ತನೆಯ ಶತಮಾನದ ಮರಾಠಿ ಸಾಹಿತ್ಯದ ಮೇಲೆ ಎಚ್ಚರಿಸುವ ಹಾಗೂ ಪರಿವರ್ತನಾ ಆಂದೋಲನದ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಈ ಆಂದೋಲನದಲ್ಲಿ ಮಧ್ಯಮ ವರ್ಗ ಪ್ರಮುಖವಾಗಿತ್ತು. ಆದರೆ ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಸಾವಕಾಶವಾಗಿ ಚಿತ್ರಗಳು ಬದಲಾಗತೊಡಗಿದವು. ಮಧ್ಯಮವರ್ಗ ಬಹುಜನ ಸಮಾಜದಲ್ಲಿ ಪ್ರವೇಶಿಸತೊಡಗಿತು. ಮಧ್ಯಮ ವರ್ಗ ಆಂದೋಲನ ಹಾಗೂ ವೈಚಾರಿಕತೆಯಿಂದ ದೂರಾಗತೊಡಗಿತು. ವಿಶೇಷವಾಗಿ ಶಹರದ ಮಧ್ಯಮ ವರ್ಗದ ಜನ ಸ್ವ ಕೇಂದ್ರದ, ಆತ್ಮ ಮಗ್ನ, ಅಸಂವೇದನಗಳಾಗತೊಡಗಿದರು. ಇದಕ್ಕೆ ಕಾರಣವೆಂದರೆ ರಾಜಕೀಯ ಪರಿಸ್ಥಿಯಲ್ಲಿ ನಡೆಯತಕ್ಕಂತಹ ಸರಿಯಾದ ಹಾಗೂ ತಪ್ಪು ಘಟನೆಗಳು ಇದರೊಂದಿಗೆ ವೈಶ್ವಿಕರಣದ ನೆರಳಿನಲ್ಲಿ ಶಹರದ ಮಧ್ಯಮ ವರ್ಗದ ಉಪಭೋಗವಾದಿಗಳ ಜೊತೆ ಕೈಗೂಡಿಸಿದರು.

ಹೊಸ ಶತಮಾನದ ಆರಂಭದಲ್ಲಿಯೇ ಮರಾಠಿ ಸಾಹಿತ್ಯದ ಎರಡು ಪ್ರಮುಖ ಧಾರೆಗಳು ಕಾಣತೊಡಗಿದವು. ಮೊದಲನೆಯ ಮಹಾನಗರಿಯ ಜೀವನದಲ್ಲಿ ಆತ್ಮ ಮಗ್ನ ಜನರ ಅನುಭವ ವಿಶ್ವಕ್ಕೆ ತಿಳಿಸುವ ಸಾಹಿತ್ಯ ಮತ್ತು ಎರಡನೆಯ, ಮಹಾನಗರದ ಆನಂದ ಅನುಭವಿಸುವ ಜೀವನ ಪದ್ಧತಿಯಿಂದ ಸ್ವತಃ ದೂರವಿರುವ ಸಾಹಿತ್ಯ ಹಾಗೂ ತನ್ನನ್ನು ತಾನು ರಕ್ಷಿಸುವ, ಜಾಗತೀಕರಣದ ಕತ್ತಲಿನಲ್ಲಿ ತನ್ನ ಆರ್ಥಿಕ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳುವ ಸಂಘರ್ಷಮಯವಾದ ಸಾಹಿತ್ಯ. ಮಹಾನಗರದ ಪರಿಧಿಯ ಹೊರಗೆ ಕಳೆದ ೧೦-೧೨ ವರ್ಷಗಳಲ್ಲಿ ದಲಿತ ಮತ್ತು ಗ್ರಾಮೀಣ ಸಾಹಿತ್ಯದ ಮಧ್ಯದ ಸೀಮೆಯಲ್ಲಿ ಕೆಲವು

ಘಟನೆಗಳು ಘಟಿಸಿದವು. ಗ್ರಾಮೀಣ ಸಾಹಿತ್ಯದಲ್ಲಿ ಜಾತಿಯತೆ ಹಾಗೂ ಮಹಿಳೆಯನ್ನು ಕುರಿತು ಕೆಲ ಪ್ರಶ್ನೆಗಳು ಉದ್ಭವಗೊಂಡವು. ದಲಿತ ಸಾಹಿತ್ಯವು ಕೂಡಾ ಜಾತಿ-ಜಾತಿಗಳ ಮಧ್ಯದ ಅಂತರ-ವಿರೋಧ ಹಾಗೂ ಆತ್ಮಚಿಕಿತ್ಸೆಯ ಮಾರ್ಗದಲ್ಲಿ ನಡೆದರು. ಜಾಗತೀಕರಣದ ವಿರೋಧ ಸಂಘರ್ಷ ಮಾಡುವವದಕ್ಕಾಗಿ ಸಾಹಿತ್ಯ ರಾಷ್ಟ್ರವಾದಿ ದೃಷ್ಟಿಕೋನದಲ್ಲಿ ಸಾಗಿದರು. ಈ ರಾಷ್ಟ್ರವಾದಿ ದೃಷ್ಟಿಕೋನ ಅಧಿಕವಾಗಿ ಸೆಕ್ಯೂಲರ ಹಾಗೂ ಸಾಮಾನ್ಯ ಜನತೆ ಕಡೆಗೆ ಇತ್ತು. ರಾಜನ್ ಗವಸ ಅವರ ಕಾದಂಬರಿ 'ತಣಕಟ' ದ ಮುಖಾಂತರ ದೇವದಾಸಿ ಹಾಗೂ ಜೋಗತಿಯರ ಪ್ರಶ್ನೆಗಳನ್ನು ಮುಂದಿಡುವ ಪ್ರಯತ್ನ ಮಾಡಿದ್ದಾರೆ. ಇದೆ ರೀತಿಯಾಗಿ ಜಿ. ಕೆ. ಐನಾಪುರೆ ಅವರ 'ಅಭಿಸರಣ' ಕಾದಂಬರಿ ಪರಿವರ್ತನೆ ಹಾಗೂ ರಾಜನೀತಿಯ ನೆಲೆಯಲ್ಲಿ ಬರೆಯಲ್ಪಟ್ಟಿದೆ.

ಮಹಾನಗರಗಳ ಉಪಭೋಗವಾದಿ ಸಂಸ್ಕೃತಿಯ ವಿರೋಧವಾಗಿ ಬರೆಯಲ್ಪಟ್ಟ ಗೌತಮಿಪುತ್ರ ಕಾಂಬಳೆ ಅವರ 'ಪರಿವ್ರಾಜಕ' ಕಥಾ ಸಂಕಲನ ಈ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾಗಿದೆ. 'ಪೇಶವಾಯಿತ್ ಮೇಲೇಲಾ ಪಾಂಡರಾ ಉಂದಿರ' ಈ ಕಥಾ ಸಂಕಲನದಿಂದ ಕುಮಾರ ಅನಿಲ ಅವರು ಸುಧಾರಿತ ಸಮಾಜದಲ್ಲಿ ಅಡಗಿದ ಜಾತಿಯ ಸಂವೇದನೆಗಳು ಬಿಚ್ಚಿಟ್ಟಿದ್ದಾರೆ. ರಮೇಶ ಇಂಗಳೆ ಉತ್ರಾದಕ ಬರೆದ 'ನಿಶಾಣಿ ಡಾವಾ ಅಂಗರಾ' ಕಾದಂಬರಿಯಲ್ಲಿ ಗ್ರಾಮೀಣ ಜನ-ಜೀವನ ಅವರ ಸಂಸ್ಕಾರ ಸಂಸ್ಕೃತಿಯನ್ನು ಹಿಡಿದಿಟ್ಟಿದ್ದಾರೆ.

ಇಪ್ಪತ್ತೊಂದನೆ ಶತಮಾನದಲ್ಲಿ ಸಾಹಿತಿಗಳ ದೃಷ್ಟಿ ಆಧುನಿಕತೆಯ ಕಡೆಗೆ ಹೋಗದೆ ರಾಕ್ಷಸಿ ರೂಪದ ಜಾಗತೀಕರಣದ ಕಡೆ ಸಾಗಿತು ಈ ಜಾಗತೀಕರಣದ ವಿಚಾರಗಳೊಂದಿಗೆ ಗ್ರಾಮೀಣ ಹಾಗೂ ದಲಿತ ಸಾಹಿತ್ಯ ಸಹ ಮರಾಠಿ ಸಾಹಿತ್ಯದಲ್ಲಿ ಬರಲಾರಂಭಿಸಿತು. ಕಾವ್ಯಗಳಲ್ಲಿ ಅರುಣ ಕಾಳೆ, ಮಹೇಂದ್ರ ಭವರೆ, ವಜೇಶ ಸೋಳಂಕೆ, ಪದ್ಮಾಕರ ಪವಾರ, ಪ್ರವೀಣ ಬಾಂದೇಕರ್, ಅಜಯ ಕಾಂಡರ ಮುಂತಾದ ಕವಿಗಳು ಪ್ರಮುಖರಾಗಿದ್ದಾರೆ. ಗ್ರಾಮೀಣ ಪರಿಸರದಲ್ಲಿ ಇದ್ದ ಕವಿಗಳು ಮಹಾನಗರದ ವೈಭವವನ್ನು ಅತ್ಯಂತ ಸರಳ ಹಾಗೂ ಸುಂದರವಾಗಿ ಚಿತ್ರಿಸಿದ್ದಾರೆ.

ಜಾಗತೀಕರಣದಿಂದ ಪ್ರಕೃತಿ ನಾಶವಾಗುತ್ತಾ ಇದೆ. ಈ ಪ್ರಕೃತಿ ವಿನಾಶದ ಕುರಿತು ರವೀಂದ್ರ ಶೋಭಣೆ ತಮ್ಮ 'ಪಾಂಢರ' ಕಾದಂಬರಿಯಲ್ಲಿ ಬಹಳ ಚನ್ನಾಗಿ ವಿವರಿಸಿದ್ದಾರೆ. ಇತ್ತೀಚೆಗೆ ಪ್ರಕಾಶಗೊಂಡ ಕೃತಿಗಳಲ್ಲಿ ಪಾಂಢರ ಬಹು ಚರ್ಚಿತ ಕೃತಿ ಇದಾಗಿದೆ. ಈ ಕಾದಂಬರಿಯ ಕುರಿತು ಡಾ. ಕಿಶೋರ ಸಾನಪ ಅವರು ಹೀಗೆ ಬರೆದಿದ್ದಾರೆ- "ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ಪ್ರಕಾಶಗೊಂಡ ಕೃತಿಗಳಲ್ಲಿ ಜಾಗತೀಕರಣದ ಭಯಾನಕ ರೂಪ ಈ ಕೃತಿಯಲ್ಲಿದೆ. ಜಾಗತೀಕರಣದ ಛಾಯೆಯಲ್ಲಿ ಪ್ರಕೃತಿ ನಾಶಗೊಂಡು ಕೃಷಿ ಅಸ್ತವ್ಯಸ್ಥಗೊಂಡಿದೆ. ಆರ್ಥಿಕವಾಗಿ ರೈತ ಸಂಕಟದಲ್ಲಿದ್ದಾನೆ. ಇಂತಹ ಅನೇಕ ಸಮಸ್ಯೆಗಳ ಚರ್ಚೆ ಈ ಕಾದಂಬರಿಯಲ್ಲಿ ಮಾಡಲಾಗಿದೆ.

ಇದೇ ಕ್ರಮದಲ್ಲಿ ಅಶೋಕ ಕೋಳಿ ಅವರ 'ಆಸುಡ' ಕಥಾ ಸಂಗ್ರಹ ಉಲ್ಲೇಖಿಸಲ್ಪಡುತ್ತದೆ. ಈ ಕಥಾ ಸಂಗ್ರಹದಲ್ಲಿ ಖಾನದೇಶದ ಕೃಷಿಕನ ಜೀವನ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಲಾಗಿದೆ. ವರ್ತಮಾನ ಪರಿಸ್ಥಿತಿಯಲ್ಲಿ ರೈತರ ಜೀವನ ಭಯಾನಕವಾಗಿದೆ. ಸರಿಯಾಗಿ ಬೆಳೆ ಇಲ್ಲ ಬೆಳೆ ಬಂದರೂ ಅದಕ್ಕೆ ತಕ್ಕಂತೆ ಬೆಲೆ ಇಲ್ಲಾ, ಹೀಗಾಗಿ ರೈತ ಕಂಗಾಲಾಗಿದ್ದಾನೆ ಇಂತಹ ಹಲವು ಪ್ರಶ್ನೆಗಳು ಈ ಕಥಾ ಸಂಗ್ರದಲ್ಲಿವೆ.

ಮಹಿಳಾ ಸಾಹಿತ್ಯದಲ್ಲಿ, ಕವಿತಾ ಮಹಾಜನ ಅವರು 'ಬ್ರ' ಕಾದಂಬರಿಯಲ್ಲಿ ಮಧ್ಯಮವರ್ಗದ ಮಹಿಳೆಯನ್ನು ಕೇಂದ್ರದಲ್ಲಿಟ್ಟು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಮಹಾನಗರಿಯ ಸಂಸ್ಕೃತಿಯಲ್ಲಿ ನಮ್ಮ ಗ್ರಾಮೀಣ ಸೊಡಗು ಮರೆಯಾಗುತ್ತಾ ಇದೆ. ಅನಿಲ ಕುಸೂರಕರ್ ಅವರ ತ್ರಯಸ್ಥ, ಕಮಲೇಶ ವಾಲಾವಲಕರ್ ಅವರ 'ಬಾಕಿ ಶೂನ್ಯ' ಮುಂತಾದ ಕಾದಂಬರಿಗಳಲ್ಲಿ ಈ ಎಲ್ಲ ಅಂಶಗಳನ್ನು ಕಾಣಬಹುದು.

ಸಂತಾನವಿಲ್ಲದ ಮಹಿಳೆಯ ಚಿತ್ರ ಜಯಶ್ರೀ ಧತ್ತೆಭಟ ಬರೆದ 'ಮಾತೃತ್ವಾಚಿ ಆಸ್' ಕಾದಂಬರಿಯಲ್ಲಿ ಚಿತ್ರಿತಗೊಂಡಿದೆ. ಸಂತಾನವಿಲ್ಲದ ಮಹಿಳೆಗೆ ಕುಟುಂಬ ಸಮಾಜದಲ್ಲಿ ಕೀಳಾಗಿ ನೋಡಲಾಗುತ್ತದೆ. ಇಂದು ನಾವು ಇಪ್ಪತ್ತೊಂದನೆ ಶತಮಾನದಲ್ಲಿ ಇದ್ದರೂ ಬಹಳಷ್ಟು ಜನರ ದೃಷ್ಟಿಕೋನ ಅತ್ಯಂತ ಪ್ರಾಚೀನದ್ದೆ ಇದೆ. ಗರ್ಭಧಾರಣೆಯ ಕೇವಲ ೨೮ ದಿನಗಳಲ್ಲಿ ಲಿಂಗದ ಬಗ್ಗೆ ತಿಳಿಯುತ್ತದೆ. ವಿಜ್ಞಾನದಲ್ಲಿ ಇಷ್ಟೊಂದು ಸಾಧನೆ ಮಾಡಿದ್ದರೂ ಸಹ ಇಂದು ಜನರಲ್ಲಿ ಗಂಡು ಹೆಣ್ಣು ಎಂಬ ಮನೋಭಾವ ಬದಲಾವಣೆಗೊಂಡಿಲ್ಲ ಇಂತಹ ಮಾನವೀಯ ಮನದ ಘೋಷಣೆ ಅನೇಕ ಕಥೆ-ಕಾದಂಬರಿಗಳಲ್ಲಿ ವ್ಯಕ್ತಗೊಂಡಿವೆ.

ಮರಾಠಿ ಕಥಾ ಸಾಹಿತ್ಯದಲ್ಲಿ ಮಹಾನಗರ ಜೀವನದ ಅತ್ಮಮಗ್ನ, ಹಾಗೂ ಆನಂದ ಅನುಭವಿಸುವ ಜೀವನ ಧಾರೆಗಳ ಜೊತೆಗೆ ವಿಜ್ಞಾನ ಕಥಾ ಸಾಹಿತ್ಯವೂ ಇದೆ. ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಕಥೆ ಬರೆಯುವವರಲ್ಲಿ ಜಯಂತ ನಾರಳೀಕಲ್, ಮಾಧೂರಿ ಶಾನಭಾಗ ಮುಂತಾದವರಿದ್ದಾರೆ.

ಮರಾಠಿ ಕಥಾ ಸಾಹಿತ್ಯದಲ್ಲಿ ಹಾಸ್ಯ-ವಂಗ್ಯ ಕಥೆಗಳು ಪ್ರಕಾಶಗೊಂಡಿವೆ. ಶ್ರೀಪಾದ ಕೃಷ್ಣ ಕೊಲ್ಹಾಟಕರ್, ರಾಮಗಣೇಶ ಗಡಕರಿ, ಪಿ. ಕೆ. ಅತ್ರೆ, ಜಿ. ವಿ ಜೋಶಿ, ಪು.ಲ ದೇಶಪಾಂಡೆ, ವ. ಪು. ಕಾಳೆ ಮುಂತಾದ ಲೇಖಕರು ತಮ್ಮ ಹಾಸ್ಯ ಶೈಲಿಯಿಂದ ಸಮಾಜಕ್ಕೆ ಎಚ್ಚರಿಸಿದ್ದಾರೆ. ಮರಾಠಿ ಸಾಹಿತ್ಯದಲ್ಲಿ ವಿನೋದ (ಹಾಸ್ಯ) ಒಂದು ಬಹುದೊಡ್ಡ ಸಮೃದ್ಧ ಪರಂಪರೆಯೇ ಇದೆ. ಇಂದಿಗೂ ಅವರ ಹಾಸ್ಯ ಪರಂಪರೆ ಪ್ರಭಾವಶಾಲಿ ಕಾರ್ಯ ನಿರ್ವಹಿಸುತ್ತಾ ಇದೆ. ದ.ಮಾ ಮಿರಾಸದಾರ ತಮ್ಮ ಹಾಸ್ಯ ಕಥೆಗಳಲ್ಲಿ ಗ್ರಾಮೀಣ ಜೀವನದ ಬದುಕಿನ ಸ್ವಾರಸ್ಯವನ್ನು ಹಿಡಿದಿಟ್ಟಿದ್ದಾರೆ. ಮಿರಾಸದಾರ ಅವರ 'ಮಾಜಾ ಬಾಪಾಚಾ ಪೈಂಡ' ಪ್ರಸಿದ್ಧ ಕಥಾ ಸಂಕಲನವಿದೆ. ರಾಮಚಂದ್ರ ಮುದಲಿಯಾರ್ ಆರ್.ಕೆ. ಚಯಾ ಮುಂತಾದ ಹಾಸ್ಯ ಕಥೆಗಾರರು ಮರಾಠಿ ಕಥಾ ಸಾಹಿತ್ಯವನ್ನು ಶ್ರೀಮಂತ ಗೊಳಿಸಿದ್ದಾರೆ.

ಮರಾಠಿ ಕಥಾ ಯಾತ್ರೆಯಲ್ಲಿ ಅನೇಕ ಲೇಖಕರು ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಮುಕ್ತಾ ಶಿಂಧೆ, ಗಿರಿಜಾ ಕಿಶೋರ, ಪ್ರಾ. ಎನ್. ಎಸ್. ಕ್ಷೀರಸಾಗರ, ಡಾ. ಆನಂದ ಧಾಡಗುಡೆ, ಕುಮದ ಮಂಡಲೆಕರ್, ನೀರಿಜಾ, ಸಂಜಯ ನಾಯಕ, ಸುನಂದಾ ಗೋರ, ರಾಜನ್ ಖಾನ, ಆನಂದ ಕದಂ, ಸದಾನಂದ ದೇಶಮುಖಿ ಮುಂತಾದ ಸಾಹಿತ್ಯಕಾರರಿಂದ ಮರಾಠಿ ಕಥಾ ಸಾಹಿತ್ಯ ಮೇರು ಪರ್ವತಕ್ಕೇರಿದೆ.

■

*ನಹೀ ಸದೀ ಕಾ ಮರಾಠಿ ಕಥಾ ಸಾಹಿತ್ಯ (ಹಿಂದಿ ಲೇಖನ), ಲೇಖಕಿ : ಪ್ರೊ. ಪ್ರತಿಭಾ ಮುದಲಿಯಾರ್ (ಮೈಸೂರು) ಮುಖ್ಯಸ್ಥರು ಹಿಂದಿ ವಿಭಾಗ – ಎಸ್. ಬಿ. ಕಲಾ, ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ – ವಿಜಯಪುರ*